ಜನಪದ ಗೀತೆಗಳಲ್ಲಿ ಕಾವ್ಯ ಸೌಂದರ್ಯ

ವೇದಾವತಿ ಎಸ್.

ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಸರ್ಕಾರಿ ಕಾಲೇಜು ಕಾಸರಗೋಡು.

DOI: https://doi.org/10.5281/zenodo.18471262

ABSTRACT:

ಕಾವ್ಯ ಮೀಮಾಂಸೆಯ ಪ್ರಮುಖ ಅಂಶಗಳಾದ 'ಧ್ವನಿ' ಮತ್ತು 'ರಸ'ಗಳು ಜನಪದ ಗೀತೆಗಳಲ್ಲಿ ಸಹಜವಾಗಿ ಮೈಗೂಡಿವೆ. ಗ್ರಾಮೀಣರು ಕವಿಯಾಗುವ ಉದ್ದೇಶದಿಂದ ಬರೆಯದಿದ್ದರೂ, ಅವರ ಜೀವನಾನುಭವ ಮತ್ತು ಭಾವನೆಗಳು ಉನ್ನತ ಮಟ್ಟದ ಕಾವ್ಯವಾಗಿ ಹೊರಹೊಮ್ಮಿವೆ. ಸ್ತುತಿಗೀತೆಗಳು, ತಾಯ್ತನದ ವಾತ್ಸಲ್ಯ, ಬಂಜೆಯ ನೋವು ಹಾಗೂ ನೀತಿಗೀತೆಗಳ ಮೂಲಕ ಜನಪದರು ಬದುಕಿನ ಮೌಲ್ಯಗಳನ್ನು ಮತ್ತು ಸೌಂದರ್ಯವನ್ನು ಹೇಗೆ ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ತ್ರಿಪದಿಗಳಲ್ಲಿನ ಉಪಮೆ, ರೂಪಕ ಮತ್ತು ಆಡುಮಾತಿನ ಸೊಗಸು ಶಿಷ್ಟ ಕಾವ್ಯಕ್ಕೂ ಮಾದರಿಯಾಗಿದೆ. ಒಟ್ಟಾರೆಯಾಗಿ, ಜನಪದ ಸಾಹಿತ್ಯವು ಭಾರತೀಯ ಸಂಸ್ಕೃತಿಯ ಮತ್ತು ಬದುಕಿನ ನೈಜ ಕನ್ನಡಿಯಾಗಿದ್ದು, ಕಾವ್ಯದ ಮೂಲಸತ್ವವನ್ನು ಸಾಕ್ಷಾತ್ಕರಿಸಿಕೊಂಡಿದೆ ಎಂಬುದನ್ನು ಸಾಬೀತುಪಡಿಸಲಾಗಿದೆ.

KEYWORDS:

ಜನಪದ ಗೀತೆ, ಕಾವ್ಯ ಸೌಂದರ್ಯ, ತ್ರಿಪದಿ, ಜೀವನ ಮೌಲ್ಯ, ಕಾವ್ಯ ಮೀಮಾಂಸೆ.

ಕಾವ್ಯ ಮೀಮಾಂಸೆಯಲ್ಲಿ ಧ್ವನಿಗೆ ಪ್ರಮುಖ ಸ್ಥಾನ. 'ಕಾವ್ಯಸ್ಯಾತ್ಮ ಧ್ವನಿ' ಎಂಬುದು ಕಾವ್ಯ ಲಕ್ಷಣ. ಜನಪದಕ್ಕೂ ಇದು ಹೊರತಲ್ಲ. ಅವರು ಕವಿಯಾಗಬೇಕೆಂದು ಬರೆದವರಲ್ಲ. ಆದರೂ ಇವರ ಸೃಷ್ಟಿ, ಧ್ವನಿ, ಆಶ್ಚರ್ಯ ಆಹ್ಲಾದಕರವಾಗಿ ಪ್ರೌಢಕವಿಗಳ ಸೃಷ್ಟಿಗೂ ಮಿಗಿಲಾಗಿ ಗೋಚರಿಸುತ್ತವೆ. ಅಂದರೆ ಜನಪದ ಗೀತೆಗಳಲ್ಲಿನ ಕಾವ್ಯ ಸೌಂದರ್ಯವನ್ನು ಅದರಲ್ಲಿನ ಜನಪದರ ಜೀವನಾನುಭವದ ಅಭಿವ್ಯಕ್ತಿಯ ಮೂಲಕ, ಜೀವನ ಮೌಲ್ಯಗಳ ಮೂಲಕ, ಮೇಲ್ನೋಟಕ್ಕೆ ಅವು ನಮ್ಮ ಮೇಲೆ ಬೀರುವ ಪರಿಣಾಮದ ಮೂಲಕ ಗುರುತಿಸಿಕೊಳ್ಳಬಹುದು. ಕಾವ್ಯ ನಿರ್ಮಾಣ ಪ್ರಜ್ಞೆಯಿಲ್ಲದೆ ಕೇವಲ ಭಾವ ನಿರ್ಭರತೆಯಿಂದ ಹಾಡಿದ ಜನಪದ ಕವಿಗಳು ಕಾವ್ಯದ ಮೂಲಸತ್ವವನ್ನೇ ಸಾಕ್ಷಾತ್ಕರಿಸಿಕೊಂಡಿದ್ದಾರೆ. ರೀತಿ, ರಸ, ಅಲಂಕಾರ, ಧ್ವನಿ, ವರ್ಣನೆ, ದರ್ಶನ, ಜೀವನ ಮೌಲ್ಯ ಈ ಯಾವ ದೃಷ್ಟಿಯಿಂದ ಒರೆಗೆ ಹಚ್ಚಿದರೂ, ಯಾವ ಮಾನದಂಡದಿಂದ ಅಳೆದರೂ ಜನಪದ ಗೀತೆಗಳು ಉತ್ತಮ ಕಾವ್ಯದ ಮಟ್ಟಕ್ಕೇರುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಮಗ್ರ ಜೀವನವೇ ಅದರ ಒಡಲಲ್ಲಿ ತುಂಬಿ ಬರುತ್ತದೆ. ಜೀವನದ ತಿರುಳು ಅದರ ಸಾರ, ಜನಪದ ಕಾವ್ಯಕ್ಕೆ ಅಂತಃಸ್ಫೂರ್ತಿ. ಖಂಡಖಂಡವಾಗಿ ಬದುಕಿನ ವಿವಿಧ ಕ್ಷಣಗಳಲ್ಲಿ ಅನುಭವಿಸಿದ ಒಲವು ಚೆಲುವುಗಳನ್ನು, ಸೋಲು ಗೆಲುವುಗಳನ್ನು ಅಂದಂದಿಗೆ ರೂಢಿಯಲ್ಲಿದ್ದ, ಅನುಭವಕ್ಕೆ ಎಟುಕಿದ ಆಡುಮಾತುಗಳಲ್ಲಿ ಸರಳ ಮತ್ತು ಸಹಜವಾದ ರೀತಿಯಲ್ಲಿ ಅಳವಡಿಸಿ ಜನಪದ ಕಾವ್ಯ ಹುಟ್ಟಿಕೊಂಡು ಬಂದಿದೆ.

ಅನಾದಿ ಕಾಲದಿಂದ ಬೆಳೆದುಬಂದ ಈ ಜನಪದ ಗೀತೆಗಳಿಗೆ ಪ್ರೇರಕಳಾದ ಅಧಿದೇವತೆ ಸಮಸ್ತವಾದ ಸಮಗ್ರವಾದ ಜೀವನ. ಜನಪದರು ತಮ್ಮ ಜೀವನವನ್ನು ಚಿತ್ರಿಸುವುದಷ್ಟೇ ಅಲ್ಲದೆ, ತಾವು ಶ್ರೇಷ್ಠವೆಂದು ಭಾವಿಸಿದ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಸರ್ವಕಾಲಗಳಲ್ಲಿ ಸರ್ವರೂ ಅನುಸರಿಸಬೇಕಾದ ಆದರ್ಶಗಳನ್ನು ಪ್ರತಿಪಾದಿಸಿರುವುದನ್ನು ಗಮನಿಸಿದರೆ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಜನಪದರನ್ನು ಕವಿರಾಜಮಾರ್ಗಕಾರ ಹೇಳಿರುವುದು ಸಮಂಜಸವೇ ಸರಿ.

ಜನಪದ ಗೀತೆಗಳನ್ನು ಅವುಗಳ ಸ್ವಭಾವ ಸ್ವರೂಪಗಳಿಗನುಗುಣವಾಗಿ ಸ್ತುತಿಗೀತೆಗಳು, ಸಾಂಸಾರಿಕ ಗೀತೆಗಳು, ಪ್ರೇಮ ಗೀತೆಗಳು, ನೀತಿ ಗೀತೆಗಳೆಂದು ವಿಂಗಡಿಸಲಾಗಿದೆ. ಜನಪದ ಗೀತೆಗಳು ನಮ್ಮ ಮನಸ್ಸಿಗೆ ಸಂತೋಷವನ್ನು ನೀಡುತ್ತವೆ; ಜೊತೆಗೆ ಜನಪದರ ಬಾಳಿನ ಅತ್ಯಮೂಲ್ಯ ಅನುಭವಗಳ ಸುಂದರ ಚಿತ್ರಣವನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ. ಜನಪದರು ಕಟ್ಟಾ ದೈವಭಕ್ತರು. ದೈವಭಕ್ತಿ ಇಲ್ಲದೆ ಯಾವ ಕಾರ್ಯವೂ ಇಲ್ಲ. ಆದರೆ ಅದನ್ನು ವ್ಯಕ್ತಪಡಿಸಲು ನಿರ್ದಿಷ್ಟ ಸಮಯ ಎಂದಿಲ್ಲ. ಅವರ ಪೂಜೆಯ ಕಲ್ಪನೆ ಅಪೂರ್ವವಾದುದು. ಅವರು ಕೊಡುವ ಹೋಲಿಕೆಗಳೂ ಅಷ್ಟೇ ವಿಶಿಷ್ಟವಾದುದು.

ಏಳು ಎಲ್ಲವ್ವ ತಾಯಿ, ಎಷ್ಟೊತ್ತು ಮಲಗೀದೆ
ಹೂವೆಂಜಲಾಗಿ ಹುಳಮುಟ್ಟಿ । ಕೊಳ್ಳದ

ನೀರೆಂಜಲಾಗಿ ಗಿಳಿ ಕುಡಿದು

ಸ್ತುತಿಗೀತೆಗಳಲ್ಲಿ ಒಂದಾದ ಈ ಗೀತೆಯಲ್ಲಿ ದೇವರಿಗೆ ಅರ್ಪಿತವಾಗುವ ವಸ್ತುವಿನ ಬಗೆಗಿನ ಜನಪದರ ಕಾಳಜಿ ಒಡಮೂಡಿದ ರೀತಿಯನ್ನು ಗಮನಿಸಿದಾಗ ಇದರಲ್ಲಿ ಕಾವ್ಯಸೌಂದರ್ಯವಿದೆ ಎಂಬುದನ್ನು ದೃಢಪಡಿಸುತ್ತದೆ. ಕರ್ನಾಟಕದಲ್ಲಿ ಎಲ್ಲವ್ವ ದೇವತೆಯ ಬಗೆಗೆ ಅಪಾರವಾದ ಭಯ, ಭಕ್ತಿ, ನಂಬಿಕೆ ಜನರಲ್ಲಿದೆ. ಈ ದೇವತೆ ಮಾಯಾಕಾರಳೆಂದು, ಮಹಾಚರ್ಮ ರೋಗಾದಿಗಳಾದರೆ ನಾವು ಹರಕೆ ಹೊತ್ತುಕೊಂಡರೆ ಗುಣವಾಗುತ್ತದೆಯೆಂಬ ಮುಗ್ಧ ಕಲ್ಪನೆ ಅವರಲ್ಲಿದೆ. ಅದರಂತೆ ಜನಪದರಿಗೆ ಅತೀವ ಭಕ್ತಿ ಇದೆ. ಏಳು ಕೊಳ್ಳಗಳ ದಾಟಿ ಸಿದ್ಧಗಿರಿಯಲ್ಲಿ ನೆಲೆಸಿದ ಈ ದೇವತೆಯ ಸುತ್ತಮುತ್ತಲಿನ ಸೃಷ್ಟಿ ಸೌಂದರ್ಯ ಅಪಾರ. ಈ ಸುಂದರ ತಾಣದಲ್ಲಿರುವ ಈ ದೇವತೆಯನ್ನು ಸೂರ್ಯೋದಯದ ಮುನ್ನವೇ ಎಚ್ಚರಿಸುವರೇನೋ ಎನ್ನುವಂತೆ ಈ ದೇವತೆಯ ಸೂರ್ಯೋದಯದ ಮುನ್ನವೇ ಆಗುವ ನಿತ್ಯ ಪೂಜೆಯನ್ನು ಹಾಡಿದ್ದಾರೆ. ಎಂಜಲಾಗದ ಹೂಗಳು, ನೀರು ಪೂಜೆಗೆ ಬೇಕೆಂದು, ಬನ ಬನಗಳಲ್ಲಿ ಹಾರುವ ತುಂಬಿಗಳು ಹೂಗಳಿಗೆರಗುವ ಮುನ್ನ, ಗಿಳಿವಿಂಡುಗಳು ನೀರಡಸಿ ಕೊಳದ ನೀರನ್ನು ಕುಡಿಯುವ ಮುನ್ನ ಭಕ್ತರು ಎಲ್ಲಮ್ಮ ದೇವತೆಯನ್ನು ಎಬ್ಬಿಸುವರೇನೋ ಎನ್ನುವಂತೆ ಮನೋಹರವಾಗಿ ವರ್ಣಿಸಲಾಗಿದೆ.

ದೇವರಿಗೆ ಮಾನವ ಗುಣಗಳನ್ನಾರೋಪಿಸುವ ಜನಪದರು ದೇವರೆಂಬ ಅಮೂರ್ತ ಶಕ್ತಿಯನ್ನು ಮೂರ್ತ ಸ್ವರೂಪದಲ್ಲಿ ಕಂಡು ವ್ಯವಹರಿಸುವ ಆತ್ಮೀಯ ಸಂವಾದ ನೈಜವಾಗಿ ಪ್ರತಿಬಿಂಬಿತವಾಗಿದೆ. ಕೇವಲ ಮೂರು ಸಾಲುಗಳಲ್ಲಿ ಇಷ್ಟೆಲ್ಲಾ ವಿಷಯಗಳು ಒಳಗೊಂಡಿರುವುದನ್ನು ನೋಡುವಾಗ ಜನಪದರ ಕಾವ್ಯಶಕ್ತಿ ಅದ್ಭುತವೆನಿಸುತ್ತದೆ. ಇಲ್ಲಿನ 'ನೀರೆಂಜಲಾಗಿ ಗಿಣಿ ಕುಡಿದು' ಮತ್ತು 'ಹೂವೆಂಜಲಾಗಿ ಹುಳು ಮುಟ್ಟಿ' ಎಂಬ ಜನಪದರ ಕಲ್ಪನೆ ಈ ಗೀತೆಗೆ ಹೆಚ್ಚು ಮಹತ್ವವನ್ನು ತಂದುಕೊಟ್ಟಿದೆ.

ಕಸವ ಹೊಡೆದ ಕೈ ಕಸ್ತೂರಿ ನಾತಾವು
ಬಸವಣ್ಣ ನಿನ್ನ ಸೆಗಣೀಯ ಬಳಿದ ಕೈ
ಎಸಳ ಯಾಲಕ್ಕಿ ಗೊನೆನಾತ

ಇಲ್ಲಿ ಕರ್ಮತತ್ವದ ರಹಸ್ಯ ಪ್ರತಿಪಾದನೆಗೊಂಡಿದೆ. ಕಸ, ಸೆಗಣಿ ರೈತನ ದೃಷ್ಟಿಯಲ್ಲಿ ಅಸಹ್ಯವಾದುದಲ್ಲ. ಮೂರೂ ಹೊತ್ತು ಅವುಗಳಲ್ಲಿಯೇ ಒದ್ದಾಡುತ್ತಾನೆ. ಅವನ ಕೈ, ಮೈ, ಬಟ್ಟೆ ಬರೆಗಳೆಲ್ಲಾ ಅವುಗಳ ನಾತ ಎರಚುತ್ತದೆ. ಅವಿಲ್ಲದಿದ್ದರೆ ಧನ, ಧಾನ್ಯ, ಹಣ್ಣುಕಾಯಿಗಳು ವೃದ್ಧಿಯಾಗುವುದಿಲ್ಲವೆನ್ನುವುದನ್ನು ಅವನು ಬಲ್ಲ. 'ಕಸದ ಪ್ರತಿರೂಪ ರಸ, ರಸದ ಮತ್ತೊಂದು ರೂಪ ಕಸ' ಎಂಬ ಆಧ್ಯಾತ್ಮಿಕ ಸತ್ಯ ಅವನಿಗೆ ಮನವರಿಕೆಯಾಗಿರುವಂತೆ ನಾಗರಿಕನ ನಿಶಿತಮತಿಗೆ ಹೊಳೆಯುವುದಿಲ್ಲ. ಇಂತಹ ಸತ್ಯವನ್ನು ಒಳಗೊಂಡ ಈ ಗೀತೆಯಲ್ಲಿ ಕಾವ್ಯದಲ್ಲಿರಬೇಕಾದ ಎಲ್ಲಾ ಲಕ್ಷಣಗಳನ್ನು ಕಾಣಬಹುದು.

ಸಾಂಸಾರಿಕ ಗೀತೆಗಳಲ್ಲಿನ ಈ ತ್ರಿಪದಿ ಕಾವ್ಯ ಸೌಂದರ್ಯಕ್ಕೆ ಉತ್ತಮ

ಉದಾಹರಣೆಯಾಗಿದೆ.

ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೀಲಿರುವ ಕರಕೀಯ । ಕುಡಿಯಾಂಗ
ಹಬ್ಬಲೆ ಅವರ ರಸಬಳ್ಳಿ

ಸುಂದರ ಜನಪದ ತ್ರಿಪದಿಯಾದ ಇದು ಸತ್ವಪೂರ್ಣವಾದ ಭಾಷೆ ಹಾಗೂ ಪ್ರತಿಮೆಗಳ ಸಮರ್ಥ ಸಂಯೋಜನೆಯ ಮೂಲಕ ಪದ್ಯದ ಸರಳ ಭಾವ, ಅರ್ಥ ವೈಶಾಲ್ಯವನ್ನು, ಶ್ರೀಮಂತಿಕೆಯನ್ನೂ ಪಡೆದಿದೆ. ಹೆಣ್ಣುಮಗಳು ತನ್ನ ಅಂತಃಕರಣವನ್ನು ನಿರಾಡಂಬರವಾದ ಭಾಷೆಯಲ್ಲಿ ಮೂಡಿಸಿರುವ ಬಗೆ ಅನನ್ಯವಾದುದು. ಹೆಣ್ಣುಮಗಳಿಗೆ ತವರು ಮನೆಯೆಂದರೆ ಎಲ್ಲಿಲ್ಲದ ಪ್ರೀತಿ. ತವರಿನ ಬಗೆಗೆ ಅತ್ಯಂತ ಮಧುರವಾದ ಭಾವನೆ ಅವಳ ಹೃದಯದಲ್ಲಿದೆ. ಅಲ್ಲಿನ ನೆನಪಾದಾಗಲೆಲ್ಲಾ ಕಣ್ಣು ಮಂಜಾಗಿಸುವ ರಸಾನುಭವವದು. ಅವಳ ಬದುಕಿನಲ್ಲಿ ಕಳೆದ ಅತ್ಯಂತ ಮಧುರವಾದ ಕ್ಷಣಗಳೆಲ್ಲಾ ಅವಳ ಬಾಲ್ಯಕ್ಕೆ ಸಂಬಂಧಿಸಿದವು. ಆ ನೆನಪುಗಳು ಆಕೆಯ ಅಂತಃಕರಣವನ್ನು ಮೃದುವಾಗಿ ಕಲಕಿವೆ. ಅಂಥ ಅಂತಃಕರಣದ ಪಾಲು ಕೊಟ್ಟ ತವರಿನ ಬಗೆಗೆ ಅವಳ ಹೃದಯ ಕೃತಜ್ಞತೆಯಿಂದ ಭಾರವಾಗಿದೆ. ಆ ಕೃತಜ್ಞತೆಯನ್ನು ಹೇಗೆ ಸೂಚಿಸಬೇಕು ಎಂಬ ಯೋಚನೆಯೊಂದಿಗೆ ಪದ್ಯ ಆರಂಭವಾಗುತ್ತದೆ. ಹಡೆದ ತಾಯಿ ಮಕ್ಕಳಿಗೆ ಜೀವ ಶಕ್ತಿಯಾದ ಹಾಲನ್ನುಣಿಸುವುದು ಕೇವಲ ಕರ್ತವ್ಯವಾಗಿರದೆ ಅದೊಂದು ಅಂತಃಕರಣದ ವ್ಯಾಪಾರವಾಗಿದೆ. ಇದೇ ತವರು ಮನೆಯ ಮುಖ್ಯ ಆಕರ್ಷಣೆಯ ಕೇಂದ್ರವಾದ ಹಾಲುಣಿಸಿದ ತಾಯಿಯ ಪ್ರೀತಿ, ವಾತ್ಸಲ್ಯಗಳನ್ನು ನೆನಪಿಗೆ ತರುತ್ತದೆ. ಎದೆಯಲ್ಲಿ ತುಂಬಿರುವ ತೀರಿಸಲಾಗದ ಈ ಉಪಕಾರದ ಹೊಣೆಯನ್ನು ಹಾಡಿಕೊಂಡಾದರೂ ಹಗುರ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಮುಂದೆ 'ಹೊಳೆದಂಡೀಲಿರುವ ಕರಕೀಯ ಕುಡಿಯಾಂಗ ಹಬ್ಬಲೆ ಅವರ ರಸಬಳ್ಳಿ' ಎಂದು ಅತ್ಯಂತ ಮಾರ್ಮಿಕವಾಗಿ ಹೇಳಿಕೊಳ್ಳುತ್ತಾಳೆ. ಹೊಳೆಯ ದಂಡೆಯ ಮೇಲೆ, ಹರಿವ ನೀರಿನ ತಂಪಾದ ಆಶ್ರಯದಲ್ಲಿ, ಫಲವತ್ತಾದ ಮಣ್ಣಿನಲ್ಲಿ ಕರಕೀಯ ಕುಡಿ ಹೇಗೆ ರಸವತ್ತಾಗಿ ಎಷ್ಟು ಸೊಂಪಾಗಿ ಬೆಳೆದೀತೋ ಹಾಗೆ ತವರಿನ ವಂಶದ ಕೀರ್ತಿ ಹಬ್ಬಬೇಕೆಂಬ ಆಶಯವನ್ನು ಹೊಂದಿರುವ ಗರತಿಯ ಮನಸ್ಸಿನ ಭಾವನೆಯ ಸ್ವರೂಪ ಇಲ್ಲಿ ಅಭಿವ್ಯಕ್ತಿಗೊಂಡಿರುವ ರೀತಿ ಈ ಗೀತೆಯ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದೆ.

ಹೆಣ್ಣಿಗೆ ತಾಯ್ತನ ದೊಡ್ಡ ವರ. ಹೆಣ್ಣಿನಲ್ಲಿ ತಾಯ್ತನದ ಪ್ರವೃತ್ತಿ ಬಾಲ್ಯಕಾಲದಿಂದಲೂ ಸುಪ್ತವಾಗಿರುತ್ತದೆ. ಹೆಣ್ಣು ಮಕ್ಕಳ ಬೊಂಬೆಯಾಟ ಇದನ್ನೇ ಸೂಚಿಸುತ್ತದೆ. ಕಂದನ ಲಾಲನೆ ಪಾಲನೆಯಲ್ಲಿ ಜಗತ್ತನ್ನೇ ಮರೆಯುತ್ತಾಳೆ. ಮಗು ಮನೆಯಲ್ಲಿ ಅತ್ತಿಂದಿತ್ತ ಓಡಾಡುವಾಗ ತಾಯಿಗೆ ಉಂಟಾಗುವ ಸುಖಾನುಭವ ಜನಪದ ತ್ರಿಪದಿಯಲ್ಲಿ ಬೀಸಣಿಗೆಯ ಹೋಲಿಕೆಯ ಮೂಲಕ ಕಾವ್ಯಾತ್ಮಕವಾಗಿ ವರ್ಣಿಸಲಾಗಿದೆ. ಜನಪದ ಕವಿಯ ಕಣ್ಣು ಮಗುವಿನ ಚಲನವಲನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದರ ಪರಿಣಾಮವನ್ನು ಲಕ್ಷಿಸಿ ನುಡಿಯಲ್ಲಿ ಹಿಡಿದಿಟ್ಟಿದೆ.

ಕೂಸು ಇರುವ ಮನೆಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳಹೊರಗ । ಆಡಿದರ
ಬೀಸಣಿಗೆ ಗಾಳಿ ಸುಳಿದಾವ.

ಬೀಸಣಿಗೆ ಇರುವುದು ದೇಹದ ತಾಪವನ್ನು ಶಮನಗೊಳಿಸಲು. ಮನುಷ್ಯನಿಗೆ ದೇಹದ ಆರೋಗ್ಯಕ್ಕಿಂತ ಮಾನಸಿಕ ಆರೋಗ್ಯ ಅಗತ್ಯ. ಮಗು ಓಡಾಡುತ್ತಿದ್ದರೆ ತಮ್ಮ ದೈನಂದಿನ ಮಾನಸಿಕ ಬಿಗುವು ಕಡಿಮೆಯಾಗುತ್ತದೆಯೆನ್ನುವುದು ಹೆತ್ತವರ ಕಲ್ಪನೆ. ಈ ಆಶಯ ತ್ರಿಪದಿಯಲ್ಲಿ ಸೊಗಸಾಗಿ ವರ್ಣಿತವಾಗಿದೆ.

ಮಕ್ಕಳ ನಗುವಿಗೆ ಒಂದು ಬೆಡಗಾದರೆ ಅಳುವಿಗೆ ಮತ್ತೊಂದು ಬೆಡಗು. ಅದರ ನಗುವಿನಂತೆ ಅಳುವಿನಲ್ಲೂ ಸೊಗಸಿದೆ. ಮಗು ಅತ್ತು ಗೃಹಕೃತ್ಯಕ್ಕೆ ಭಂಗ ತಂದರೂ ಚಿಂತೆಯಿಲ್ಲ. 'ಮಕ್ಕಳಿರಲವ್ವ ಮನೆತುಂಬ' ಎಂದೇ ಹಾರೈಸುತ್ತಾಳೆ ತಾಯಿ. ಅಳುವ ಮಗುವಿನ ಚಿತ್ರ ಮನೋಜ್ಞವಾದುದು. ಜನಪದ ತ್ರಿಪದಿಯೊಂದು ಅದನ್ನು ಉತ್ತಮ ಉಪಮೆಗಳಿಂದ ನಮ್ಮ ಕಣ್ಣಮುಂದೆ ತಂದು ನಿಲ್ಲಿಸುತ್ತದೆ.

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬು ಬೇವಿನೆಸಳಂಗ । ಕಣ್ನೋಟ
ಶಿವನ ಕೈಯಲಗು ಹೊಳೆದಂಗ

ಅಳುವ ಮಗುವಿನ ತುಟಿ ಹವಳದ ಕುಡಿಯಂತೆ ಕೆಂಪು. ಆ ಕುಡಿಹುಬ್ಬು ಬೇವಿನ ಎಸಳಿನಂತೆ ಮೃದುವಾಗಿಯೂ, ವಕ್ರವಾಗಿಯೂ ಇರುತ್ತದೆ. ಅಳುವಾಗ ಆತನ ಕಣ್ನೋಟ ಶಿವನ ಕೈಯಲಗು ಹೊಳೆದಂತೆ. ಶಿವನ ಕೈಯಲ್ಲಿರುವ ತ್ರಿಶೂಲ ಒಮ್ಮೆ ಮಿಂಚಿ ಮಾಯವಾಗುವಂತೆ ಈ ಕಣ್ನೋಟವೂ ಕ್ಷಣಿಕವಾದದ್ದು, ಪುಣ್ಯವಂತರಿಗೆ ಮಾತ್ರ ಲಭಿಸುವಂತದ್ದು. 'ಕಣ್ನೋಟ ಶಿವನ ಕೈಯಲಗು ಹೊಳೆದಂಗ' ಎನ್ನುವ ಮಾತು ಪರಿಣಾಮಕಾರಿಯಾಗಿದೆ. ಮುನಿಸಿನಿಂದ ಅಳುವ ಮಗುವಿಗೆ ಈ ಹೋಲಿಕೆ ಸಮರ್ಪಕ.

ಹೆಣ್ಣು ಜೀವನದ ಸಾರ್ಥಕ್ಯವನ್ನು ಕಾಣುವುದು ತಾಯ್ತನದಲ್ಲಿ. ತನ್ನ ಮಕ್ಕಳು ಎಂದರೆ ಆಕೆಗೆ ಎಲ್ಲಿಲ್ಲದ ಪ್ರೀತಿ, ವಾತ್ಸಲ್ಯ ಹಾಗೂ ನಚ್ಚುಗೆ. ತಾಯಿ ಆಟವಾಡುವ ಕಂದನ ಕಾಲು ತೊಳೆವ ಪರಿ ಹೀಗೆ...

ಆಡಿ ಬಾ ನನ ಕಂದ ಅಂಗಾಲ ತೊಳೆದೇನು
ತೆಂಗಿನ ಕಾಯಿ ತಿಳಿನೀರ । ತಕ್ಕೊಂಡು
ಬಂಗಾರ ಮೋರೆ ತೊಳೆದೇನು.

ಕಂದನ ಮೋರೆ ಬಂಗಾರದ್ದು. ಅಂಗಾಲು ಕೋಮಲವಾದದ್ದು. ಅದನ್ನು ತೊಳೆಯಲು ಸಾಧಾರಣ ಹರಿವ ನೀರು ಆಗದು, ಪರಿಶುದ್ಧವಾದ ಮಧುರವಾದ ಎಳನೀರೇ ಆಗಬೇಕು. ಅದು ಮಾತ್ರ ಮಗುವಿನ ಕಾಲು ತೊಳೆಯಲು ಯೋಗ್ಯ ಎಂಬ ಆ ತಾಯಿಯ ಕಲ್ಪನೆ ನಿಜಕ್ಕೂ ಅದ್ಭುತ. ಇಂತಹ ಕಲ್ಪನೆಗಳೇ ಈ ಗೀತೆಯ ಕಾವ್ಯ ಸೌಂದರ್ಯಕ್ಕೆ ಕಾರಣವಾಗಿದೆ.

ತಾಯ್ತನದ ಸವಿ ಉಂಡವಳದು ಒಂದು ರೀತಿಯ ಸಂತೋಷವಾದರೆ ಬಂಜೆಯಾದವಳ ನೋವು ಅದೆಷ್ಟು ತೀವ್ರತರವಾದುದು ಎಂಬುದನ್ನು ಜನಪದ ತ್ರಿಪದಿಯ ಮೂಲಕ ಗಮನಿಸಬಹುದು. ಅವಳ ನೋವು ಅಭಿವ್ಯಕ್ತಿಗೊಂಡ ರೀತಿ ಸರಳವಾದ ಪದಗಳಿಂದ ಕೂಡಿದರೂ ಅದರಲ್ಲಿನ ಕಾವ್ಯ ಸೌಂದರ್ಯ ಆ ಪದ್ಯವನ್ನು ಹೆಚ್ಚು ಸುಂದರವನ್ನಾಗಿಸಿದೆ. ಅಲ್ಲಿ ಹೊರಸೂಸುವ ಧ್ವನಿ ಅವಳ ಅಂತರಾಳದ ನೋವು. ಹೆಣ್ಣಿಗೆ ಮಕ್ಕಳೇ ಅಮೂಲ್ಯ ಭಂಡಾರ. 'ತಾಯಿಯಾಗದ ಹೆಣ್ಣು ಹೆಣ್ಣೇ?' ಎಂಬ ಉದ್ಗಾರವು ಹಳ್ಳಿಯ ಹೆಣ್ಣು ಮಕ್ಕಳಲ್ಲಿ ಮಾತುಮಾತಿಗೆ ಬರುವುದು. ಬಂಜೆಗೆ ಎಲ್ಲಾ ಕಡೆ ಅಪಮಾನ, ಇದು ಅವಳನ್ನು ಚಿಂತೆಯಲ್ಲಿ ಮುಳುಗಿಸುತ್ತದೆ. ಆಕೆಯ ಸದ್ಯದ ಸ್ಥಿತಿ ಮತ್ತು ಮುಂದಿನ ಗತಿ ಎರಡನ್ನೂ ಪ್ರಸಿದ್ಧವಾದ ಒಂದು ತ್ರಿಪದಿ ಮಾರ್ಮಿಕವಾದ ಉಪಮೆಗಳ ಮೂಲಕ ಹೃದ್ಯವಾಗಿ ಸ್ಪಷ್ಟಪಡಿಸುತ್ತದೆ.

ಬಾಲಕರಿಲ್ಲದ ಬಾಲೀದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದ್ಹಾಂಗ । ಬಾಳೆಲೆಯ
ಹಾಸ್ಯುಂಡು ಬೀಸೀ ಒಗೆದಾಂಗ

ಹೆಣ್ಣಿನ ಏಕೈಕ ಆಸೆ ಸಂತಾನ ಪ್ರಾಪ್ತಿ. ಬಾಲಕರಿಲ್ಲದ ಬದುಕು ಗರತಿಗೆ ಬೇಡ. ಅದು ಬಾಡಿಗೆ ಎತ್ತಿನ ದುಡಿಮೆ. ಬಾಳೆಲೆಯ ಹಾಸಿ ಉಂಡು ಬೀಸಿ ಒಗೆವ ಕ್ರಿಯೆ. ನಮ್ಮ ಸಮಾಜ ಮಕ್ಕಳಿಲ್ಲದವರನ್ನು ಹೇಗೆ ಗುರುತಿಸುತ್ತಿತ್ತು ಎಂಬುದನ್ನು ಸೂಚಿಸುವ ಈ ತ್ರಿಪದಿ ಹೊರಡಿಸುವ ಧ್ವನಿ ನೇರವಾಗಿ ನಮ್ಮ ಹೃದಯಕ್ಕೆ ತಟ್ಟುತ್ತವೆ. ಬಾಡಿಗೆ ಎತ್ತಿನ ಹೋಲಿಕೆ ಮೊದಲು ಬಂದಿದೆ. ಬಂಜೆ ಬಾಡಿಗೆ ಎತ್ತಿನಂತೆ. ಬಾಡಿಗೆ ಎತ್ತು ದುಡಿಯುವ ಒಂದು ಯಂತ್ರ ಮಾತ್ರ. ಅದಕ್ಕೂ ಭಾವನೆಗಳಿವೆಯೆಂಬುದು ಯಾರಿಗೂ ಅರ್ಥವಾಗುವುದಿಲ್ಲ. ಅದರಿಂದ ಮೈಮುರಿಯುವಂತೆ ದುಡಿಸಿಕೊಳ್ಳುವುದಷ್ಟೇ ಎಲ್ಲರಿಗೂ ಗೊತ್ತು. ಪ್ರೀತಿ, ಸಹಾನುಭೂತಿಗಳು ಎಳ್ಳಷ್ಟೂ ಅದರ ಪಾಲಿಗಿರುವುದಿಲ್ಲ. ಪರರ ಸುಖ ಸಂತೋಷಕ್ಕಾಗಿ ಮಾತ್ರ ಅದರ ಅಗತ್ಯ. ಮೂಕಜೀವಿಯ ಮೂಕರೋದನ ಅರಣ್ಯರೋದನ. ಅದು ಬಾಡಿಗೆ ಎತ್ತಾಗದೆ ಸ್ವಂತದ್ದಾದರೆ ಅದರ ಬಗ್ಗೆ ಇರುವ ಆದರ, ಆಸ್ಥೆ ಎಷ್ಟು! ಇಲ್ಲಿ ಬಂಜೆ ಬಾಡಿಗೆ ಎತ್ತೇ ಹೊರತು ಮನೆಯ ಎತ್ತಲ್ಲ. ಇನ್ನು ಬಾಳೆಲೆಯ ಉಪಯೋಗ ಊಟವಾಗುವ ತನಕ. ಆಗ ಅದರ ಬಗ್ಗೆ ಕಾಳಜಿ ಎಷ್ಟು! ಹರಿದು ಹೋಗದಂತೆ ಜಾಗರೂಕರಾಗಿರುತ್ತೇವೆ. ಅದರ ಉಪಯೋಗ ಮುಗಿಯಿತೋ ಅದು ತಿಪ್ಪೆಗುಂಡಿಯಲ್ಲಿ. ಬಂಜೆಯ ಗತಿಯೂ ಅಷ್ಟೇ. ದುಡಿಯುವ ಯಂತ್ರವಾಗಿ ಆಕೆ ಬೇಕು. ಆಮೇಲಿನ ಸ್ಥಿತಿ 'ಬೀಸಿ ಒಗೆದಂಗ' ಎನ್ನುವ ಮಾತಿನಲ್ಲಿ ಸ್ಪಷ್ಟವಾಗಿ ಧ್ವನಿತವಾಗಿದೆ. ತಿರಸ್ಕಾರ, ಅವಜ್ಞೆ, ಅವಹೇಳನಗಳನ್ನೆಲ್ಲಾ ಅದು ಚೆನ್ನಾಗಿ ವ್ಯಕ್ತಪಡಿಸುತ್ತದೆ. ಗ್ರಾಮೀಣ ಮಹಿಳೆಯ ಕವಿತ್ವ ಶಕ್ತಿ ಮತ್ತು ಕಲ್ಪನಾಶಕ್ತಿ ಎಷ್ಟು ಪರಿಣಾಮಕಾರಿಯಾಗಿ ಮೂಡಿಬಂದಿದೆ ಎನ್ನುವುದನ್ನು ಈ ತ್ರಿಪದಿಯ ಮೂಲಕ ತಿಳಿಯಲು ಸಾಧ್ಯವಾಗುತ್ತದೆ.

ತಾಯಿ ಇಲ್ಲದ ತವರು 'ಕಡಗ ಇಲ್ಲದ ಕೈಯಂತೆ'. ಕೈಗೆ ಬಳೆ ಶೋಭಾಯಮಾನವಾಗಿರುವಂತೆ ತಾಯಿ ಇರುವ ತವರು ಉನ್ನತ ಮಟ್ಟದ್ದು. ತಾಯಿ

ಇರುವ ತವರು ಹೆಣ್ಣಿಗೆ ಹೇಗೆ ಕಾಣುತ್ತದೆಯೆಂಬುದು ತ್ರಿಪದಿಯಲ್ಲಿ ಮೂಡಿಬಂದ ಪರಿ ಹೀಗೆ:

ಬ್ಯಾಸಗಿ ದಿವಸಕ ಬೇವಿನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ । ಹಡೆದವ್ವ
ನೀ ತಂಪ ನನ್ನ ತವರಿಗೆ.

ಕ್ಷೋಭೆಗೊಂಡ ಮನಸ್ಸು ತಂಪಾದ ವಾತಾವರಣವನ್ನು ಬಯಸುತ್ತದೆ. ಹೆಣ್ಣು ಒಂದು ವೇಳೆ ಗಂಡನ ಮನೆಯಲ್ಲಿ ಜಗಳವಾಡಿ ಬಂದರೆ ಅವಳ ಮನಸ್ಸನ್ನು ತಿಳಿ ಮಾಡುವುದಲ್ಲದೆ ಹಿತವಾಗಿ ಬುದ್ಧಿವಾದವನ್ನು ಹೇಳುತ್ತಾಳೆ. ಆಗ ಆಕೆಗೆ ತಾಯಿಯ ಮಹತ್ವದ ಅರಿವಾಗಿ ಆಕೆ ಹೀಗೆ ಹೇಳುತ್ತಾಳೆ. ಅಂಥ ತಾಯಿಗೆ ಯಾವ ಜ್ಯೋತಿ ಸಮಾನ?

ಯಾರು ಇದ್ದಾರು ನನ್ನ ತಾಯವ್ವನೋಲಾರ
ಸಾವಿರ ಕೊಳ್ಳಿ ಒಲಿಯಾಗ । ಇದ್ದಾರ
ಜ್ಯೋತಿ ನಿನ್ಯಾರು ಹೋಲಾರ.

ಉಪಮಾತೀತವಾದ ಅದ್ವಿತೀಯ ಜ್ಯೋತಿಯ ಪ್ರತೀಕವಾಗಿ ತಾಯಿ ಹೊಳೆಯುತ್ತಾಳೆ. ಆಕೆಯಂಥ ಒಂದು ಸ್ಥಿರವಾದ ಪ್ರಕಾಶಮಾನವಾದ ಪ್ರತಿಮೆ ಅಂತರಂಗದಲ್ಲಿ ಒಡಮೂಡಿದೆ. ಸದಾ ಅಡುಗೆಮನೆಯಲ್ಲಿರುವ ಹೆಣ್ಣಿಗೆ ಇಂಥ ಹೋಲಿಕೆ ಕಂಡದ್ದರಲ್ಲಿ ಉತ್ಪ್ರೇಕ್ಷೆಯಿಲ್ಲ. ಅವಳ ಕವಿ ಪ್ರತಿಭೆ ಮೆಚ್ಚುವಂತದ್ದು. ತಾಯಿ ಜೀವಕ್ಕೆ ಯಾರೂ ಸಮಾನರಲ್ಲ. ಯಾವುದೂ ಹೋಲಿಕೆಯಲ್ಲ. ಅದೇ ಅವಳ ವೈಶಿಷ್ಟ್ಯ .

ಪ್ರೇಮಗೀತೆಗಳಲ್ಲಿ ಜನಪದರ ಅಮೂಲ್ಯ ಜೀವನದ ಸುಂದರ ಕ್ಷಣಗಳು ಹೇಗೆ ಸೊಗಸಾಗಿ ಮೂಡಿಬಂದಿದೆ ಎಂಬುದನ್ನು ಈ ಕೆಳಗಿನ ತ್ರಿಪದಿಯಲ್ಲಿ ನೋಡಬಹುದು.

ಕಾಡಿಗಣ್ಣಿನೋಳ ಕೂಡಿದ್ದುಬ್ಬಿನೋಳ
ಕೋಡೀಲಿ ನೀರ ಮೊಗೆಯೋಳಾ । ಕಂಡ್ಕೊಂಡು
ಕೋಗಿಲೆ ಮೇವ ಮರೆತಾವು.

ಸಮಗ್ರ ಸೌಂದರ್ಯವನ್ನೊಳಗೊಂಡ ಈ ಪದ್ಯದಲ್ಲಿ ಜನಪದರ ಹೆಣ್ಣಿನ ಚೆಲುವು ಆಕರ್ಷಕವಾಗಿ ಚಿತ್ರಿತಗೊಂಡಿದೆ. ಇಲ್ಲಿ ರೂಪಕೋಪಮೆಗಳೆಲ್ಲವೂ ವಿನೂತನವಾದುದು, ವಿಶಿಷ್ಟವಾದುದು. ಗಂಡ ಹೆಂಡತಿಯರ ನಡುವಿನ ಸರಸ-ವಿರಸಗಳು ಜನಪದ ಗೀತೆಗಳಲ್ಲಿ ಸಹಜಾನುಭವದ ಮಾತುಗಳ ಮೂಲಕ ಹೊರಹೊಮ್ಮಿದೆ. ಮೇಲ್ನೋಟಕ್ಕೆ ಈ ಗೀತೆಯಲ್ಲಿ ಕಾವ್ಯ ಸೌಂದರ್ಯವನ್ನು ಗುರುತಿಸಲು ಸಾಧ್ಯ. ತವರಿನ ಗೀಳು, ತೀವ್ರತೆಗಳಿರುವ ಹೆಣ್ಣಿಗೆ ಏಕೈಕ ಆಸರೆ ಪತಿ. ಅವಳು ಆತನನ್ನು ಅವಲಂಬಿಸುತ್ತಾಳೆ. ಅವನು ಒಮ್ಮೆ ಮಡದಿಯನ್ನು ಬಡಿದರೂ ಮನದಲ್ಲಿ ಮರುಗಿ 'ನಾ ಹೆಚ್ಚೋ ನಿನ್ನ ತವರೆಚ್ಚೋ' ಎಂದು ಕೇಳುತ್ತಾನೆ.

ಜನಪದರ ನೀತಿಗೀತೆಗಳಲ್ಲಿಯೂ ಕಾವ್ಯಸೌಂದರ್ಯವನ್ನು ಗುರುತಿಸಬಹುದು. ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಮಾತುಗಳಿರುವ ಸ್ವಾರಸ್ಯವುಳ್ಳ ಕೆಲವು ಗೀತೆಗಳು ಇದರಲ್ಲಿ ಬರುತ್ತವೆ. ಕೆಟ್ಟವರ, ಉತ್ತಮರ ಸಂಗ ಹೇಗೆ ವ್ಯತ್ಯಸ್ತವಾದುದೆನ್ನುವುದನ್ನು ಹೀಗೆ ಹೇಳುತ್ತಾರೆ:

ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತ್ತಹೀನರ ಗೆಳೆತನ । ಮಾಡಿದರ
ಹಿತ್ತಾಳೆಗಿಂತ ಬಲುಹೀನ.

ಹಿತ್ತಾಳೆ ತನ್ನ ಸಂಪರ್ಕಕ್ಕೆ ಬಂದ ವಸ್ತುವನ್ನು ಕೆಡಿಸುತ್ತದೆ. ತಾನು ಕೆಡುವುದಲ್ಲದೆ ಇನ್ನೊಂದನ್ನು ಕೆಡಿಸುತ್ತದೆ. ಅದೇ ರೀತಿ ಕೆಟ್ಟವರು ತಾವು ಕೆಡುವುದಲ್ಲದೆ ಸಜ್ಜನರನ್ನೂ ಕೆಡುವಂತೆ ಮಾಡುತ್ತಾರೆ. ಸರ್ವಜ್ಞ ಹೇಳಿದಂತೆ 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ದುರ್ಜನರ ಸಂಗವದು ಬಚ್ಚಲರೊಚ್ಚಿನಂತಿಹುದು.'

ಜೀವನ ಮೌಲ್ಯವನ್ನು ಸುಂದರವಾಗಿ ಪ್ರತಿಪಾದಿಸಿದ ಮತ್ತೊಂದು ತ್ರಿಪದಿಯನ್ನು ಗಮನಿಸಬಹುದು. ಜೀವನದ ನಶ್ವರತೆಯ ಕಲ್ಪನೆ ಜನಪದರಲ್ಲಿ ಅಗಾಧವಾಗಿ ನೆಲೆಯೂರಿರುವುದಕ್ಕೆ ನಿದರ್ಶನ ಈ ತ್ರಿಪದಿ:

ನಿದ್ದೆಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ವಿದ್ಯ ಬಲ್ಲವನಿಗೆ ಭಯವುಂಟೆ । ದೇವರೆ
ಮದ್ದುಂಟೆ ಜನನ ಮರಣಾಕೆ.

ಜನಪದರು ಮಗುವಿನ ಬೆಳವಣಿಗೆಯ ಪ್ರಥಮ ಹಂತದಲ್ಲಿಯೇ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಆಚಾರ-ವಿಚಾರಗಳನ್ನು ಹೇಳಿಕೊಡುತ್ತಿದ್ದರು. ಅಕ್ಷರದ ಅರಿವು ಇಲ್ಲದಿದ್ದರೂ ಪ್ರಜ್ಞಾವಂತ ಮನಸ್ಸು ಅವರೊಳಗೆ ನೆಲೆಸಿತ್ತು ಎನ್ನುವುದು ಜನಪದ ತ್ರಿಪದಿಯ ಮೂಲಕ ತಿಳಿಯಲು ಸಾಧ್ಯವಾಗುತ್ತದೆ. ಬಾಳಿನ ಸವಿಯನ್ನೇ ಆಸ್ವಾದಿಸುವ ಸಾರಗ್ರಾಹಿ ಮನೋಧರ್ಮವಿದೆ. ಇಂತಹ ಉತ್ತಮ ಜೀವನ ಮೌಲ್ಯವನ್ನೊಳಗೊಂಡ ಗೀತೆಗಳು ನಮ್ಮ ಬಾಳಿಗೆ ದಾರಿದೀಪವಾಗಿವೆ.

ಜನಪದ ಕವಿಗಳು ಸಹಜಸ್ಫೂರ್ತಿಯಿಂದ ಹಾಡಿದ ಈ ಗೀತೆಗಳ ಭಾಷೆಯ ಪಾರದರ್ಶಕತೆಯಿಂದಾಗಿ ಅದರಲ್ಲಿರುವ ಭಾವಾರ್ಥಗಳೂ, ರಸಧ್ವನಿಗಳೂ, ಜೀವನ ಮೌಲ್ಯಗಳು ನೇರವಾಗಿ ಓದುಗರ ಹೃದಯವನ್ನು ಮುಟ್ಟಬಲ್ಲುದು ಎಂಬುದರಲ್ಲಿ ಸಂಶಯವಿಲ್ಲ. ಜನಪದರು ಸಾಮಾನ್ಯ ವಸ್ತುಗಳಲ್ಲೂ ಅಸಾಮಾನ್ಯತೆಯನ್ನು ಕಾಣಬಲ್ಲರು. ಅವುಗಳಲ್ಲಿ ಕಾವ್ಯಸೌಂದರ್ಯ ಅಡಗಿದೆ. ಬದುಕಿಗೆ ಶೋಭೆಯನ್ನು ತಂದುಕೊಡುವ ಎಲ್ಲ ಗುಣಗಳೂ ಸಮಾವೇಶವಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ, ಕಾವ್ಯಮೀಮಾಂಸಕರ ಹಾಗೆಯೇ, ನಾವೂ ಕಾವ್ಯ ಸೌಂದರ್ಯವನ್ನು ಅವುಗಳಲ್ಲಿನ ಕಾವ್ಯಲಕ್ಷಣ, ರಸ, ಧ್ವನಿ, ಅಲಂಕಾರ, ಗುಣ, ಜೀವನಮೌಲ್ಯಗಳ ಮೂಲಕ ಗುರುತಿಸುತ್ತೇವೆ. ಕಾವ್ಯಮೀಮಾಂಸಕರಿಗೆ ಜನಪದರ ಹಾಡುಗಳೇ ಪ್ರೇರಣೆಯನ್ನೊದಗಿಸಿವೆ ಎಂದು ಹೇಳಬಹುದು. ಜನಪದ ಗೀತೆಗಳಲ್ಲಿ

ಅಭಿವ್ಯಕ್ತಿಗೊಳ್ಳುವ ಸಂಸಾರ ಧರ್ಮದಲ್ಲಿ, ಕರ್ಮಭಕ್ತಿ ಯೋಗಗಳಲ್ಲಿ, ಸೌಂದರ್ಯೋಪಾಸನೆಯಲ್ಲಿ, ಜೀವನ ಮೌಲ್ಯ ವಿವರಣೆಯಲ್ಲಿ ಅಂತೆಯೇ ಅದರ ರಸಿಕತೆಯಲ್ಲಿ ನಮ್ಮ ಸಂಸ್ಕೃತಿಯ ಮಹೋನ್ನತಿ ಪ್ರಕಟವಾಗಿದೆ.

ಪರಾಮರ್ಶನ ಗ್ರಂಥಗಳು:

1. ಜವರೇಗೌಡ ದೇ., (2015), ಜನಪದ ಗೀತಾಂಜಲಿ, ಬೆಂಗಳೂರು: ಸಪ್ನ ಬುಕ್ ಹೌಸ್.
2. ಜವರೇಗೌಡ ದೇ., (2015), ಜಾನಪದ ಅಧ್ಯಯನ, ಬೆಂಗಳೂರು: ಸಪ್ನ ಬುಕ್ ಹೌಸ್.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.